ಚುರುಕಾಗಿ, ಸಮಸ್ಯೆಯನ್ನು ವಿಮರ್ಶಾತ್ಮಕವಾಗಿ ಬಿಡಿಸಲು ನೀವು ಸಮರ್ಥರಾಗುವಿರಿ. ಜೀವನದಲ್ಲಿ ಮಹತ್ತರವಾದುದನ್ನು ಸಾಧಿಸುವಿರಿ" ಎಂದು ಹೇಳಿದರು. ವಸಂತನು ಎದ್ದುನಿಂತು, "ಸರ್, ನಾವೆಲ್ಲ ರಚನಾತ್ಮಕವಾಗಿ ಆಲೋಚಿಸುವುದನ್ನು ಕಲಿತು, ದೊಡ್ಡವರಾದ ಮೇಲೆ ಉತ್ತಮ ವ್ಯಕ್ತಿಗಳಾಗಿ, ಆದರ್ಶ ಪ್ರಜೆಗಳಾಗುವೆವು" ಎಂದನು. ಅದಕ್ಕೆ ಕುಲಕರ್ಣಿಯವರು ಹೀಗೆ ಹೇಳಿದರು: "ದೊಡ್ಡವರಾದ ಮೇಲೆ ಉತ್ತಮ ವ್ಯಕ್ತಿಗಳಾಗುವುದಲ್ಲ. ಮೊದಲು ಉತ್ತಮ ವಿದ್ಯಾರ್ಥಿಯಾಗಬೇಕು. 'ಗಿಡವಾಗಿ ಬಗ್ಗದ್ದು, ಮರವಾಗಿ ಬಗ್ಗೀತೆ' ಎಂಬ ನಾಣ್ಣುಡಿಯಂತೆ, ನಮ್ಮ ನಡತೆಯನ್ನು ವಿದ್ಯಾರ್ಥಿಜೀವನದಲ್ಲಿಯೇ ರೂಪಿಸಿಕೊಳ್ಳಬೇಕು. ನಡತೆಯನ್ನು ರೂಪಿಸಿಕೊಳ್ಳಲು ಜ್ಞಾನವನ್ನು ಸಂಪಾದಿಸುವುದು ಅತಿ ಮುಖ್ಯ. ಅದೇ ವಿದ್ಯಾರ್ಥಿಯ ಆದ್ಯ ಕರ್ತವ್ಯ ಕೂಡ. ಉತ್ತಮ ವಿದ್ಯಾರ್ಥಿಯಾಗಲು ನೀವು ಇವುಗಳನ್ನು ಮಾಡಬೇಕು:

೧. ಜ್ಞಾನಾರ್ಜನೆಗಾಗಿ ತವಕದಿಂದ ಪ್ರಯತ್ನಿಸಿ.

೨. ನಡತೆಯನ್ನು ರೂಪಿಸಿಕೊಳ್ಳಲು ಬಾಧಕವಾದ, ಮನಸ್ಸನ್ನು ಚಂಚಲಗೊಳಿಸುವ ಮನರಂಜನೆಗಳ ತ್ಯಾಗಕ್ಕೆ ಸಿದ್ಧರಾಗಿ.

೩. ಓದಲು ಸಮರ್ಪಕವಾದ ವೇಳಾಪಟ್ಟಿಯನ್ನು ತಯಾರಿಸಿ, ನಿಯಮಿತವಾಗಿ ಅದನ್ನು ಅನುಸರಿಸಿ.

೪. ಒಳ್ಳೆಯ ಹವ್ಯಾಸಗಳನ್ನು ರೂಢಿಸಿಕೊಳ್ಳಿರಿ.

೫. ಉತ್ಸಾಹವನ್ನು ತುಂಬುವ, ಚೈತನ್ಯದ ಚಿಲುಮೆಯಂತಿರುವ ಮಹಾವ್ಯಕ್ತಿಗಳ ಜೀವನ ಮತ್ತು ಸಂದೇಶವನ್ನು ಪ್ರತಿದಿನವೂ ಸ್ವಲ್ಪ ಓದಿರಿ. ಅವರು ಜೀವನದಲ್ಲಿ ಸಫಲತೆಯನ್ನು ಸಾಧಿಸಿದ ಬಗೆಯನ್ನು ಅರಿತುಕೊಳ್ಳಿ.

೬. ಸೋಲು ಗೆಲುವುಗಳನ್ನು ಸಮಾನವಾಗಿ ಸ್ವೀಕರಿಸಿರಿ. ಸೋಲಿನಲ್ಲಿ ಕುಗ್ಗದೆ, ಗೆಲುವಿನಲ್ಲಿ ಹಿಗ್ಗದೆ ಮನಸ್ಸಿನ ಸಮತೋಲನವನ್ನು ಕಾಯ್ದುಕೊಳ್ಳಿ.

೭. 'ಬಿತ್ತಿದಂತೆ ಬೆಳೆ' ಎಂಬ ನಾಣ್ಣುಡಿಯಂತೆ, ಬಾಲ್ಯದಿಂದಲೇ ಒಳ್ಳೆಯ ಸಂಸ್ಕಾರಗಳನ್ನು ರೂಢಿಸಿಕೊಳ್ಳಿ. 'ನಿಮ್ಮ ಬಾಳಿನ ಶಿಲ್ಪಿ ನೀವೇ' ಎಂಬುದನ್ನು ನೆನಪಿಡಿ.

೮. ನಿಮ್ಮ ದೇಹ-ಮನಸ್ಸುಗಳ ಪವಿತ್ರತೆಯನ್ನು ಕಾಯ್ದುಕೊಳ್ಳಿ."

ಕುಲಕರ್ಣಿ ಮಾಸ್ತರರು ಮುಂದುವರಿದು ಹೀಗೆ ಹೇಳಿದರು: "ದೃಢ ಸಂಕಲ್ಪ ಮತ್ತು ಸತತ ಪ್ರಯತ್ನದಿಂದ, ಸಾಮಾನ್ಯ ವಿದ್ಯಾರ್ಥಿಯೂ ಸಹ ಉತ್ಕೃಷ್ಟವಾದುದನ್ನು ಸಾಧಿಸಬಲ್ಲ. ಹಳ್ಳಿಯ ವಿದ್ಯಾರ್ಥಿನಿಯಾದ ಮಂಜುಳಾ ಪರಿಶ್ರಮದಿಂದ ವೈದ್ಯಳಾದ ಸಂಗತಿಯನ್ನು ಈಗ ಹೇಳುವೆ. ಮಂಜುಳಾ ಹಳ್ಳಿಯ ಕಡುಬಡವರ ಮನೆಯಲ್ಲಿ ಹುಟ್ಟಿದವಳು. ಅವಳ ತಂದೆತಾಯಿಗಳು ತಮಗಿದ್ದ ತುಂಡು ಭೂಮಿಯಲ್ಲಿ ಬೇಸಾಯವನ್ನು ಮಾಡಿ ಜೀವಿಸುತ್ತಿದ್ದರು. ಮಂಜುಳಾ ಮತ್ತು ಅವಳ ತಮ್ಮ ದೀಪಕ್ ಬೇಸಾಯದ ಕೆಲಸದಲ್ಲಿ ಅವರಿಗೆ ಸಹಾಯ ಮಾಡುತ್ತಿದ್ದರು."

"ಪುಸ್ತಕಪ್ರೇಮಿಯಾದ ಮಂಜುಳಾಳಿಗೆ ಚಿಕ್ಕ ಹುಡುಗಿ ಆಗಿದ್ದಾಗಿನಿಂದ ಕಲಿಯುವ ಹುಚ್ಚು. ಅವಳು ವೈದ್ಯಳಾಗುವ ಕನಸನ್ನು ಕಾಣುತ್ತಿದ್ದಳು. ಐದನೆಯ ತರಗತಿಯ ಪರೀಕ್ಷೆಯ ನಂತರ ಅವಳ ತಂದೆ, 'ಮಂಜು, ಮುಂದಿನ ವರ್ಷದಿಂದ ನೀನು ಶಾಲೆಗೆ ಹೋಗುವುದು ಬೇಡ. ಶಾಲೆಯ ಶುಲ್ಕವನ್ನು ಕಟ್ಟಲು ಮತ್ತು ಪುಸ್ತಕಗಳನ್ನು ಕೊಳ್ಳಲು ನನ್ನಲ್ಲಿ ಹಣವಿಲ್ಲ. ಮುಂದಿನ ವಾರದಿಂದ ನೀನು ಮುಖ್ಯ ರಸ್ತೆಯಲ್ಲಿರುವ ವೈದ್ಯರ ಮನೆಯಲ್ಲಿ ಕೆಲಸಕ್ಕೆ ಹೋಗು' ಎಂದು ಹೇಳಿದರು. ಇದನ್ನು ಕೇಳಿ ಮಂಜುಳಾಳ ಕನಸುಗಳೆಲ್ಲಾ ನುಚ್ಚುನೂರಾದವು. ಹತಾಶಳಾದ ಮಂಜುಳಾ ಅತ್ತಿದ್ದೇ ಅತ್ತಿದ್ದು. ಅಸಹಾಯಕಳಾದ ಅವಳ ತಾಯಿಯು ಅವಳನ್ನು ಸಮಾಧಾನ ಮಾಡಲು ಬಹಳ ಯತ್ನಿಸಿದರು.

"ಮಂಜುಳಾ ವೈದ್ಯರ ಮನೆಯಲ್ಲಿ ಮನೆಗೆಲಸದವಳಾಗಿ ದುಡಿದಳು. ಕೆಲವೊಮ್ಮೆ ಆಸ್ಪತ್ರೆಯಲ್ಲಿಯೂ ಸಹಾಯವನ್ನು ಮಾಡುತ್ತಿದ್ದಳು. ಇದೇ ರೀತಿ ಎರಡು ವರ್ಷ ಕಳೆಯಿತು. ಒಂದು ದಿನ ಪುಸ್ತಕಪ್ರಿಯಳಾದ ಆಕೆ ವೈದ್ಯರ ಮನೆಯಲ್ಲಿದ್ದ ಒಂದು ನಿಘಂಟನ್ನು ಕುತೂಹಲದಿಂದ ತೆಗೆದು ನೋಡಿದಳು. ಬಿಡುವಾದಾಗಲೆಲ್ಲ ಪ್ರತಿದಿನವೂ ಅದನ್ನು ಓದುತ್ತಿದ್ದಳು. ಕ್ರಮೇಣ ಆಸಕ್ತಿಯಿಂದ ಕಥೆಪುಸ್ತಕಗಳನ್ನು ಮತ್ತು ವೃತ್ತಪತ್ರಿಕೆಗಳನ್ನು ಓದತೊಡಗಿದಳು. ವೈದ್ಯರು ಆಕೆಯ ಆಸಕ್ತಿಯನ್ನು ಮೆಚ್ಚಿ, ಆಕೆಯನ್ನು ಸಂಜೆಯ ಶಾಲೆಗೆ ಸೇರಿಸಿದರು.

"ಮಂಜುಳಾ ಸಂಜೆಯ ತನಕ ವೈದ್ಯರ ಮನೆಯಲ್ಲಿ ದುಡಿದು ಅನಂತರ ಶಾಲೆಗೆ ಹೋಗುತ್ತಿದ್ದಳು. ರಾತ್ರಿ ಶಾಲೆಯಿಂದ ಬಂದು ಮನೆಪಾಠವನ್ನು ಮುಗಿಸಿ, ತಾಯಿಗೆ ಮನೆಗೆಲಸದಲ್ಲಿ ಸಹಾಯ ಮಾಡುತ್ತಿದ್ದಳು. ಅರ್ಧವಾರ್ಷಿಕ ಪರೀಕ್ಷೆಯಲ್ಲಿ ಸಾಮಾನ್ಯ ಅಂಕಗಳನ್ನು ಪಡೆದರೂ, ಎದೆಗುಂದದೆ ಛಲದಿಂದ ಅಭ್ಯಾಸವನ್ನು ಮುಂದುವರಿಸಿದಳು. ಯಾವ ಸಹಪಾಠಿಗಳು ಮೊದಮೊದಲು ಆಕೆಯನ್ನು ನೋಡಿ ಪರಿಹಾಸ್ಯ ಮಾಡುತ್ತ ನಗುತ್ತಿದ್ದರೋ, ಅವರೆಲ್ಲ ವಾರ್ಷಿಕ ಪರೀಕ್ಷೆಯ ಫಲಿತಾಂಶವನ್ನು ನೋಡಿ ನಿಬ್ಬೆರಗಾದರು. ಏಕೆಂದರೆ, ಮಂಜುಳಾ ತರಗತಿಗೇ ಮೊದಲಿಗಳಾಗಿ ಪಾಸಾಗಿದ್ದಳು!

"ಮಂಜುಳಾಳ ಓದಿನ ಪ್ರಯೋಜನವನ್ನು ಪಡೆದ ಮೊದಲಿಗರೆಂದರೆ ಅವಳ ತಂದೆ-ತಾಯಿಗಳು. ಆಕೆ ಕೃಷಿಮಾಡುವ ಆಧುನಿಕ ವಿಧಾನವನ್ನು ಓದಿ, ಒಳ್ಳೆಯ ಫಸಲನ್ನು ತೆಗೆಯುವ ರೀತಿಯನ್ನು ಅವರಿಗೆ ವಿವರಿಸಿ ಹೇಳಿದಳು. ಬೆಳೆದ ಬೆಳೆಯನ್ನು ಉತ್ತಮ ಬೆಲೆಗೆ ಮಾರಾಟ ಮಾಡುವ ವ್ಯಾಪಾರದ ಕಲೆಯನ್ನು ತಾನೇ ಸ್ವಂತ ಕಲಿತು, ಮನೆಯ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಿದಳು. ವೈದ್ಯರ ಸಹಾಯದಿಂದ ಕಾಲೇಜಿನ ಶಿಕ್ಷಣವನ್ನು ಮುಗಿಸಿ, ವೈದ್ಯಕೀಯ ಕಾಲೇಜಿನಲ್ಲಿ ಪ್ರವೇಶವನ್ನು ಪಡೆದಳು. ಈಗ ಆಕೆ ಉತ್ತಮ ವೈದ್ಯಳಾಗಿ ಸೇವೆ ಸಲ್ಲಿಸುತ್ತಿದ್ದಾಳೆ. ಮಂಜುಳಾಳಂತೆ ನೀವೂ ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಿ, ಎದೆಗುಂದದೇ ಪ್ರಯತ್ನವನ್ನು ಮುಂದುವರಿಸಿ, ನಿಸ್ವಾರ್ಥಿಗಳಾಗಿ. ಅಭ್ಯಾಸ, ತಾಳ್ಮೆ ಮತ್ತು ಸತತ ಪ್ರಯತ್ನ – ಇವು ಯಶಸ್ಸನ್ನು ಗಳಿಸುವ ಮುಖ್ಯ ಸಾಧನಗಳು" ಎಂದು ಕುಲಕರ್ಣಿಯವರು ತಮ್ಮ ಮಾತನ್ನು ಮುಗಿಸಿದರು.

(ಆಧಾರ: *The Guiding Light,*
Pub: Ramakrishna Mission, Belur Math)

ಭಾವಾನುವಾದ: ಬ್ರಹ್ಮಚಾರಿ ಅರವಿಂದ

★

# ಓದುವುದು ಹೇಗೆ?

## ಅಧ್ಯಯನ ವಿಧಾನ

ಎಲ್ಲರಿಗಿಂತ ಒಳ್ಳೆಯ ಸ್ನೇಹಿತ ಯಾರು ಗೊತ್ತೇ? ನಾವು ಓದುವ ಪುಸ್ತಕಗಳು. ಪುಸ್ತಕಗಳ ಸಂಗ ನಮಗೆ ಒಳ್ಳೆಯ ಸ್ನೇಹಿತನ ಜೊತೆಗೆ ಒಡನಾಡುವ ಮಧುರ ಅನುಭವವನ್ನು ತಂದುಕೊಡುತ್ತದೆ. ಹತ್ತಿರ ಯಾರೂ ಇರದಾಗ, ಏಕಾಂತದಲ್ಲಿ ನಾವು ಹೊಂದಬಹುದಾದ ಅತ್ಯುತ್ತಮ ಸಂಗಾತಿಯೇ ಪುಸ್ತಕಗಳು ಎಂದರೆ ತಪ್ಪಾಗಲಾರದು. ಹೀಗಾಗಿ ಪುಸ್ತಕಗಳನ್ನು ಪರಿಣಾಮಕಾರಿಯಾಗಿ ನಮ್ಮ ಒಳಿತಿಗೆ ಮತ್ತು ವ್ಯಕ್ತಿತ್ವ ವಿಕಾಸಕ್ಕೆ ನಾವು ಬಳಸಿಕೊಳ್ಳಬೇಕು. ಅದಕ್ಕೆ ಈ ಕೆಳಗಿನ ಕೆಲವು ಅಂಶಗಳನ್ನು ನಾವು ನೆನಪಿನಲ್ಲಿ ಇಟ್ಟುಕೊಳ್ಳಬೇಕು:

೧. ನಿಮ್ಮದೇ ಆದ ಪ್ರಪಂಚದಲ್ಲಿ ಮುಳುಗಿಹೋಗಲು ಅನುಕೂಲವಾಗುವಂತೆ ಅಧ್ಯಯನಕ್ಕೆ ಏಕಾಂತ ಪರಿಸರವನ್ನು ಆಯ್ಕೆ ಮಾಡಿಕೊಳ್ಳಿ. ನಿಮ್ಮ ಮನೆಯಲ್ಲಿ ಅದಕ್ಕೆ ಅವಕಾಶವಿಲ್ಲದಿದ್ದರೆ, ಹೊರಗಡೆ ಪ್ರಕೃತಿಯ ಮಡಿಲಿನಲ್ಲಿ ಓದುವ ಅಭ್ಯಾಸವನ್ನು ರೂಢಿಸಿಕೊಳ್ಳಿ.

೨. ನೀವು ಓದುವ ಕೊಠಡಿಯಲ್ಲಿ ಸಾಕಷ್ಟು ಗಾಳಿ-ಬೆಳಕು ಇರಬೇಕು. ಇಲ್ಲದಿದ್ದರೆ, ನಿಮ್ಮ ಕಣ್ಣಿಗೆ ಆಯಾಸವಾಗುತ್ತದೆ. ಉಸಿರಿಗೆ ತೊಂದರೆಯಾಗುತ್ತದೆ.

೩. ನಿಮ್ಮ ದೇಹದ ಯಾವುದೇ ಭಾಗಕ್ಕೆ ನೋವಾಗದಂತೆ ನಿಮ್ಮ ಆಸನ ವ್ಯವಸ್ಥೆ ಇರಬೇಕು. ಯಾವುದೇ ತರಹದ ಅಧ್ಯಯನವನ್ನು ಕೂಡ ನೀವು ಗಂಭೀರವಾಗಿ ಮಾಡಬೇಕು. ಒಂದು ವಿಷಯವನ್ನು ಓದುವಾಗ, ಆ ವಿಷಯಕ್ಕೆ ಸಂಬಂಧಪಟ್ಟ ಆಕರಗ್ರಂಥಗಳು (ನಿಘಂಟು ಮೊದಲಾದವು) ಮತ್ತು ಪರಿಕರಗಳನ್ನು ನಿಮಗೆ ಸುಲಭವಾಗಿ ಸಿಕ್ಕುವಂತೆ ಸಮೀಪದಲ್ಲಿಯೇ ಇಟ್ಟುಕೊಳ್ಳಬೇಕು.

೪. ನಾವು ಆರೋಗ್ಯದಿಂದ ಇದ್ದರೆ ಮಾತ್ರ ಚೆನ್ನಾಗಿ ಓದಬಲ್ಲೆವು. ಅದಕ್ಕಾಗಿ ಯೋಗಾಸನ, ವ್ಯಾಯಾಮ, ವೇಗನಡಿಗೆ, ಆಟಗಳು – ಮೊದಲಾದವುಗಳಿಂದ ನಮ್ಮ ಆರೋಗ್ಯವನ್ನು ಚೆನ್ನಾಗಿ ಇಟ್ಟುಕೊಳ್ಳಬೇಕು. ಆರೋಗ್ಯವಂತ ವ್ಯಕ್ತಿಯ ಇಂದ್ರಿಯಗಳು ಕಸುವಿನಿಂದಲೂ, ಲವಲವಿಕೆಯಿಂದಲೂ ಕೂಡಿರುತ್ತದೆ. ಆಗ ಓದುವುದು ಉಲ್ಲಾಸಕರ ಅನುಭವವಾಗುತ್ತದೆ; ಓದಿದ ವಿಷಯ ಬೇಗನೆ ಅರ್ಥವಾಗುತ್ತದೆ.

೫. ನೀವು ಏನನ್ನು ಓದುತ್ತಿರೋ, ಅದನ್ನು ವಿಮರ್ಶಾತ್ಮಕವಾಗಿ ಓದಿ. ವಿಜ್ಞಾನದ ವಿಷಯವಾಗಲಿ, ಸಾಹಿತ್ಯ ಅಥವಾ ಸಮಾಜಶಾಸ್ತ್ರವಾಗಲಿ – ಅವುಗಳಲ್ಲಿ ನೀವು ವಿಶ್ಲೇಷಣೆ ಮಾಡುವ ದೃಷ್ಟಿಕೋನವನ್ನು ಬೆಳೆಸಿಕೊಳ್ಳಬೇಕು. ಇಲ್ಲದಿದ್ದರೆ ನಮ್ಮ ಅಧ್ಯಯನಕ್ಕೆ ಬೆಲೆ ಇರುವುದಿಲ್ಲ. ಓದಿದ್ದನ್ನೆಲ್ಲ ಪ್ರಶ್ನಿಸದೆ, ವಿಚಾರ ಮಾಡದೆ ಸ್ವೀಕರಿಸುವ ಅವೈಜ್ಞಾನಿಕ ಪ್ರವೃತ್ತಿ ನಮ್ಮಲ್ಲಿ ಬೆಳೆದುಬಿಡುತ್ತದೆ. ಆದ್ದರಿಂದ, ತರ್ಕಬದ್ಧವಾಗಿ ವಿಚಾರಮಾಡುತ್ತ ಓದುವುದು ಒಳ್ಳೆಯದು. ಆಗ ನಮಗೆ ನಿಜ-ಸುಳ್ಳುಗಳನ್ನು, ಮುಖ್ಯ-ಅಮುಖ್ಯವಾದುದನ್ನು ಬೇರ್ಪಡಿಸುವ ವಿವೇಚನಾಶಕ್ತಿ ಬೆಳೆಯುತ್ತದೆ. ಅಂತಹ ವಿವೇಕಬುದ್ಧಿ ಜೀವನದ ಯಶಸ್ಸಿಗೆ ಅತ್ಯವಶ್ಯಕ.

೬. ನಾವು ಜೀವಿಸಲು ಓದಬೇಕೇ ಹೊರತು, ಓದುವುದಕ್ಕಾಗಿ ಜೀವಿಸುವುದಲ್ಲ. ಆದ್ದರಿಂದ ಕಾಲವನ್ನು ಕಳೆಯಲು ಮಾತ್ರವೇ ಓದಬಾರದು. ಏನನ್ನು ಓದಿದರೂ, ಅದರಿಂದ ನಮ್ಮ ಜೀವನಕ್ಕೆ ಅವಶ್ಯವಾದ ಗುಣಗಳನ್ನು ಕಲಿಯುವಂತಿರಬೇಕು. ಕಥೆ ಪುಸ್ತಕವಾಗಿರಲಿ, ಅಥವಾ ಇತರೆ ಪುಸ್ತಕಗಳಾಗಲಿ ನಮ್ಮ ಬದುಕನ್ನು ಸರ್ವಾಂಗ ಸುಂದರವನ್ನಾಗಿ ಮಾಡಿಕೊಳ್ಳುವುದಕ್ಕೆ ಸಹಾಯಕವಾಗಿರಬೇಕು. ಅಂತಹ ಪುಸ್ತಕಗಳನ್ನೇ ನಾವು ಆಯ್ಕೆ ಮಾಡಿಕೊಂಡು ಓದಬೇಕು.

೭. ನಿಮ್ಮ ಪಠ್ಯಪುಸ್ತಕಗಳನ್ನು ಕೇವಲ ಪರೀಕ್ಷೆಯ ದೃಷ್ಟಿಯಿಂದ ಮಾತ್ರವೇ ಓದಬೇಡಿ. ವಿಷಯಗಳನ್ನು ತಿಳಿದುಕೊಳ್ಳಬೇಕು ಎಂಬ ಕಾತರ, ಕುತೂಹಲ ಮತ್ತು ಆಸಕ್ತಿಗಳಿಂದ ಓದಿ. ಆನಂದದಿಂದ, ಸ್ವಂತ ಇಚ್ಛೆಯಿಂದ ಓದಬೇಕು. ಯಾರದೋ ಒತ್ತಾಯಕ್ಕೆ, ಬೇಜಾರುಮಾಡಿಕೊಂಡು ಓದಿದರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಕಲಿಕೆ ಎನ್ನುವುದು ನಮಗೆ ಸಂತೋಷವನ್ನು ನೀಡಬೇಕು.

೮. ಪುಸ್ತಕವನ್ನು ಓದುವುದಕ್ಕೆ ಮೊದಲು ಪುಸ್ತಕಗಳಲ್ಲಿರುವ ವಿಷಯಗಳ ಬಗ್ಗೆ ಗೌರವ ಭಾವನೆ ಇರಬೇಕು. ಉದಾಹರಣೆಗೆ, ಕನ್ನಡ ಸಾಹಿತ್ಯವನ್ನು ಓದುವ ಮೊದಲು, ನಮ್ಮ ಮಾತೃಭಾಷೆಯಾದ ಕನ್ನಡದ ಬಗ್ಗೆ ಅಭಿಮಾನ, ಕನ್ನಡವನ್ನು ಕಟ್ಟಿ ಬೆಳೆಸಿದ ದೊಡ್ಡ ದೊಡ್ಡ ಸಾಹಿತಿಗಳ ಬಗ್ಗೆ ಗೌರವ, ಅವರ ವಿಚಾರಗಳನ್ನು ಕಲಿತು ತಾನೂ ಒಬ್ಬ ಸಾಹಿತ್ಯಾಭಿಮಾನಿಯಾಗಬೇಕೆಂಬ ಆಕಾಂಕ್ಷೆ – ಇವೆಲ್ಲ ಇದ್ದರೆ ಆಗ ಅದರ ಅಧ್ಯಯನ ಹರ್ಷಯುತವಾಗುತ್ತದೆ, ಫಲದಾಯಕವಾಗುತ್ತದೆ.

೯. ಓದುವುದಕ್ಕಿಂತ ಮೊದಲೇ ಯಾವುದೇ ಒಂದು ವಿಷಯ ಬಹಳ ಕಷ್ಟ ಎಂದು ಭಾವಿಸಿಕೊಳ್ಳುವುದು, ನಮ್ಮನ್ನು ಧೈರ್ಯಗೆಡುವಂತೆ ಮಾಡುತ್ತದೆ. ಪ್ರಯತ್ನಶೀಲನಿಗೆ ಯಾವುದೂ ಕಷ್ಟವಲ್ಲ. ಆದ್ದರಿಂದ, "ಯಾವುದೇ ವಿಷಯವನ್ನು ನಾನು ಕರಗತಮಾಡಿಕೊಂಡೇ ತೀರುತ್ತೇನೆ" ಎನ್ನುವ ಅದಮ್ಯ ಆತ್ಮವಿಶ್ವಾಸ ಬಹಳ ಮುಖ್ಯ. ಇಂತಹ ಸಕಾರಾತ್ಮಕ ಮನೋಭಾವನೆ ನಮ್ಮ ಮನಸ್ಸನ್ನು ಏಕಾಗ್ರಗೊಳಿಸುತ್ತದೆ.

೧೦. ಜ್ಞಾನವು ಎಲ್ಲಕ್ಕಿಂತ ಅಮೂಲ್ಯವಾದ ಸಂಪತ್ತು. ಅದು ಯಾವ ಕಳ್ಳನೂ ನಮ್ಮಿಂದ ಕದಿಯಲಾಗದ ಸ್ವತ್ತು. ಹಾಗೆಯೇ ಅದನ್ನು ಇತರರಿಗೆ ಕೊಟ್ಟರೂ ಅದು ಖರ್ಚಾಗುವುದಿಲ್ಲ. ಅಂತಹ ಶ್ರೇಷ್ಠ ನಿಧಿ ಪುಸ್ತಕಗಳಲ್ಲಿದೆ. ಆದ್ದರಿಂದ ಪುಸ್ತಕಗಳನ್ನು ಜೋಪಾನವಾಗಿ ಇಟ್ಟುಕೊಳ್ಳಬೇಕು. ಪುಸ್ತಕಗಳನ್ನು ಪ್ರೀತಿಸುವುದನ್ನು ಕಲಿಯಬೇಕು. ಆಗ ಮಾತ್ರವೇ ಅವು ತಮ್ಮಲ್ಲಿರುವ ಜ್ಞಾನರಾಶಿಯನ್ನು ನಮ್ಮ ಮುಂದೆ ಬಿಚ್ಚಿಡುತ್ತವೆ.

(*ಮುಂದಿನ ತಿಂಗಳು:* ಜ್ಞಾಪಕಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಹತ್ತು ಸೂತ್ರಗಳು)

# ಪರಮಪೂಜ್ಯ ಸ್ವಾಮಿ ಭೂತೇಶಾನಂದಜಿ ಮಹಾರಾಜ್ ಅವರ ಸವಿನೆನಪುಗಳು

## ದೀಕ್ಷಾಗುರುವಾಗಿ ಸ್ವಾಮಿ ಭೂತೇಶಾನಂದಜಿ

ಬ್ರಹ್ಮಚಾರಿ ಜ್ಞಾನಾತ್ಮಚೈತನ್ಯ

*(ಹಿಂದಿನ ಸಂಚಿಕೆಯಿಂದ)*

ಶ್ರೀರಾಮಕೃಷ್ಣರ ಉದ್ಯಾನವನದಲ್ಲಿ ಅವರೇ ಆಯ್ಕೆ ಮಾಡುವ ಸುಗಂಧ ತುಂಬಿದ ಪುಷ್ಪಗಳು ಅರಳುತ್ತವೆ. ಅಂತಹ ಹೂವುಗಳಲ್ಲಿ ಕೆಲವು ಸಂಪೂರ್ಣವಾಗಿ ವಿಕಾಸಗೊಂಡು, ಸಂಸಾರತಾಪದಿಂದ ಬೆಂದು ಬಳಿಗೆ ಬಂದ ಸಾವಿರಾರು ಜನರಿಗೆ ತಮ್ಮ ಸುವಾಸನೆಯನ್ನು ಬೀರುತ್ತವೆ; ಅವರಿಗೆ ಸುಖ, ಶಾಂತಿ ಮತ್ತು ಸೌಹಾರ್ದಗಳನ್ನು ನೀಡುತ್ತವೆ. ಅಂತಹ ಒಂದು ಪವಿತ್ರ ಪುಷ್ಪವೇ ಪರಮಪೂಜ್ಯ ಶ್ರೀಮತ್ ಸ್ವಾಮಿ ಭೂತೇಶಾನಂದಜಿ ಮಹಾರಾಜ್. ಅರಳಿನಿಂತ ಪುಷ್ಪಗಳಿಗೆ ಹೇಗೆ ಭೃಂಗಗಳು ಮುತ್ತುತ್ತವೋ, ಹಾಗೆಯೇ ಸ್ವಾಮೀಜಿಯವರ ಬಳಿಗೆ, ಅವರ ಪ್ರೀತಿ, ಸ್ನೇಹ, ಕರುಣೆ ಮತ್ತು ವಾತ್ಸಲ್ಯಗಳನ್ನು ಸವಿಯಲು, ಅಪಾರ ಸಂಖ್ಯೆಯಲ್ಲಿ ಭಕ್ತರು ಬರುತ್ತಿದ್ದರು. ಹೀಗೆ ಸ್ವಾಮೀಜಿಯವರ ಬಳಿ ಮಂತ್ರದೀಕ್ಷೆ ಪಡೆದು, ತಮ್ಮ ಜೀವನಕ್ಕೆ ಹೊಸ ಅರ್ಥವನ್ನು ತಂದುಕೊಂಡವರ ಒಟ್ಟು ಸಂಖ್ಯೆ ೧, ೨೧, ೦೨೭.

'ಗುರುತತ್ತ್ವ' ಎಂಬ ವಿಷಯವನ್ನು ಕುರಿತು ಸ್ವಾಮಿ ಭೂತೇಶಾನಂದಜಿ ಅವರು ಮಾಡಿದ ಭಾಷಣವನ್ನು ರಾಮಕೃಷ್ಣ ಮಹಾಸಂಘದ ಬಂಗಾಳಿ ಮಾಸಪತ್ರಿಕೆಯಾದ 'ಉದ್ಬೋಧನ'ದಲ್ಲಿ ಪ್ರಕಟಿಸಲಾಗಿದೆ. ಅದರಲ್ಲಿನ ಕೆಲವು ಗಮನಾರ್ಹ ಉಕ್ತಿಗಳು ಹೀಗಿವೆ: "ಶ್ರೀರಾಮಕೃಷ್ಣರಿಂದ ಸಂನ್ಯಾಸ ಪಡೆದ ನಮ್ಮ ಸಂಘದ ಹಿರಿಯರು ಶ್ರೀರಾಮಕೃಷ್ಣರೇ ನಮ್ಮ ಗುರುಗಳು ಹಾಗೂ ಇಷ್ಟದೇವತೆ ಎಂದು ಹೇಳಿದ್ದಾರೆ. ಆದ್ದರಿಂದಲೇ ನಮ್ಮ ಸಂಘದ ಗುರುಪರಂಪರೆಯಲ್ಲಿ ಯಾರೇ ಆಗಲಿ, ತಮ್ಮನ್ನು ಗುರುವೆಂದು ಭಾವಿಸುವುದಿಲ್ಲ. ಅದಕ್ಕೆ ಬದಲಾಗಿ ಶ್ರೀರಾಮಕೃಷ್ಣರ ಒಂದು ಉಪಕರಣ ಮಾತ್ರ ಎಂದು ಭಾವಿಸುತ್ತಾರೆ."

ಒಮ್ಮೆ ಸ್ವಾಮಿ ಚೇತನಾನಂದರು ಮಂತ್ರದೀಕ್ಷೆಗೆ ಸಂಬಂಧಪಟ್ಟ ಹಾಗೆ ಕೆಲವು ಪ್ರಶ್ನೆಗಳನ್ನು ಕೇಳಿದರು. ಅದಕ್ಕೆ ಉತ್ತರವಾಗಿ ಸ್ವಾಮಿ ಭೂತೇಶಾನಂದಜಿ ಹೀಗೆ ಉತ್ತರಿಸಿದರು: "ಜಪ ಮಾಡುವಾಗ ಮಂತ್ರದ ಅರ್ಥವನ್ನು ಅಥವಾ ನಮ್ಮ ಆಯ್ಕೆಯ ಇಷ್ಟದೇವತೆಯ ರೂಪವನ್ನು ಭಾವಿಸಿಕೊಳ್ಳಬೇಕು. ಅದರ ಜೊತೆಗೆ ಧ್ಯಾನವನ್ನೂ ಮಾಡಬೇಕು. ಭಗವಂತನು ಕರುಣಾಮಯ, ಕೃಪಾಸಿಂಧು, ತ್ಯಾಗಮೂರ್ತಿ ಮತ್ತು ಪಾವನಮೂರ್ತಿ ಎಂದು ಆ ಸಮಯದಲ್ಲಿ ಮನನ ಮಾಡಬೇಕು. ಗೋಪಿಯರು ಶ್ರೀಕೃಷ್ಣನನ್ನು ಹಲವಾರು ಭಾವಗಳಿಂದ ಧ್ಯಾನಿಸುತ್ತಿದ್ದರು. ಎಲ್ಲಕ್ಕಿಂತ ಮುಖ್ಯವಾದುದು 'ಭಗವಂತ ನಮ್ಮವನೇ' ಎಂಬ ಭಾವನೆಯನ್ನು ದೃಢವಾಗಿ ಮನಸ್ಸಿಗೆ ತಂದುಕೊಳ್ಳುವುದು. ತಾಯಿ ಮಗುವಿನ ಮೇಲೆ ತೋರಿಸುವ ಪ್ರೀತಿ ತರ್ಕಕ್ಕೆ ಮೀರಿದುದು. ಅದರಲ್ಲಿ ಪವಿತ್ರತೆ, ನಿಸ್ವಾರ್ಥತೆಗಳು



ಘನೀಭೂತವಾಗಿ ಕೇವಲ ಶುದ್ಧ ಪ್ರೇಮವೊಂದೇ ಇರುತ್ತದೆ. ಭಗವಂತನನ್ನು ಈ ರೀತಿ ಪ್ರೀತಿಸಬೇಕು.

"ಓಂಕಾರವು ಬ್ರಹ್ಮದ ಸಂಕೇತ. ಬೀಜಮಂತ್ರವು ಶಕ್ತಿಯ ಸಂಕೇತ ಹಾಗೂ ಇಷ್ಟದೇವತೆಯು ಅವತಾರದ ಸಂಕೇತ. ಇದರರ್ಥ, ಬ್ರಹ್ಮ, ಶಕ್ತಿ, ಅವತಾರಗಳು ಬೇರೆಯಲ್ಲ, ಅವೆಲ್ಲವೂ ಒಂದೇ ಎಂದು.

"ಭಕ್ತನು ಜಪದಿಂದ ಭಗವಂತನ ಕೃಪೆಯನ್ನು ಪಡೆದು ತನ್ನ ಮನೋಭಿಲಾಷೆಗೆ ಅನುಗುಣವಾಗಿ ಅಭ್ಯುದಯವನ್ನು ಸಾಧಿಸಬಹುದು ಅಥವಾ ಭಗವಂತನನ್ನೇ ಹೊಂದಬಹುದು."

ಒಮ್ಮೆ ಸ್ವಾಮೀಜಿಯವರ ಕಾರ್ಯದರ್ಶಿಗಳಾದ ಸ್ವಾಮಿ ನಿತ್ಯಮುಕ್ತಾನಂದಜಿ ಮಂತ್ರದೀಕ್ಷೆಯ ಸಂಬಂಧವಾಗಿ ಅವರೊಡನೆ ಮಾತನಾಡುತ್ತಿದ್ದರು. ಅಲ್ಲಿಯೇ ಇದ್ದ ಸ್ವಾಮಿ ಚೇತನಾನಂದರು ಸ್ವಾಮೀಜಿಯವರ ಅನಾರೋಗ್ಯದಿಂದಾಗಿ, ದೀಕ್ಷೆಯನ್ನು ಅಪೇಕ್ಷಿಸುತ್ತಿರುವ ಭಕ್ತರ ಸಂಖ್ಯೆ ಬೆಳೆಯುತ್ತಿರುವುದನ್ನು ಅವರ ಗಮನಕ್ಕೆ ತಂದರು. ಹಾಗೂ, ಅದಕ್ಕೆ ಒಂದು ಪರಿಹಾರವನ್ನೂ ಸೂಚಿಸಿದರು:

"ಮಹಾರಾಜ್, ನೀವು ಮಂತ್ರವನ್ನು ಮಾತ್ರವೇ ಉಪದೇಶಿಸಿ. ಮಿಕ್ಕದ್ದನ್ನು ಸ್ವಾಮಿ ನಿತ್ಯಮುಕ್ತಾನಂದರು ನೋಡಿಕೊಳ್ಳುತ್ತಾರೆ" ಎಂದು ಅವರು ಹೇಳಿದರು. ಸ್ವಾಮಿ ಭೂತೇಶಾನಂದಜಿ ಅವರಿಗೆ ಮಂತ್ರದೀಕ್ಷೆಯ ಬಗೆಗೆ ಇದ್ದ ದೃಷ್ಟಿಕೋನ ಇದಕ್ಕೆ ಅವರು ನೀಡಿದ ಉತ್ತರದಿಂದ ತಿಳಿದುಬರುತ್ತದೆ. ಅವರು ಹೀಗೆ ಹೇಳಿದರು: "ನನಗೆ ಸಮಾಧಾನವಾಗಬೇಕು. ದೀಕ್ಷೆಯ ಮುಂಚೆ ಮತ್ತು ಅದು ಮುಗಿದನಂತರ ಭಕ್ತರಿಗೆ ನಾನು ಕೆಲವು ವಿಷಯಗಳನ್ನು ತಿಳಿಸುತ್ತೇನೆ. ದೀಕ್ಷೆಯನ್ನು ಪಡೆಯುವುದರ ಪ್ರಯೋಜನವೇನು, ಮಂತ್ರದ ಅರ್ಥವೇನು, ಧ್ಯಾನದ ವಿಧಾನ – ಇವುಗಳ ಬಗ್ಗೆ ವಿವರಿಸಿ ಹೇಳಿ, ದೀಕ್ಷಾರ್ಥಿಗಳಿಗೆ ಕೆಲವು ಉಪದೇಶಗಳನ್ನು ನೀಡುತ್ತೇನೆ. ಅವೆಲ್ಲವನ್ನೂ ತಿಳಿಸಿ ಹೇಳದಿದ್ದರೆ, ನನಗೆ ತೃಪ್ತಿ ಇರುವುದಿಲ್ಲ." ಭಕ್ತರನ್ನು ಕುರಿತು ಸ್ವಾಮೀಜಿಯವರಿಗೆ ಅದೆಷ್ಟು ಪ್ರೀತಿ ಮತ್ತು ವಾತ್ಸಲ್ಯ!

ನಾವೀಗ ಆ ಮಹಾತ್ಮರ ಜೀವನದಲ್ಲಿ ಭಕ್ತರೊಡನೆ ಅವರ ಒಡನಾಟಕ್ಕೆ ಸಂಬಂಧಿಸಿದಂತೆ ಕೆಲವು ಘಟನೆಗಳನ್ನು ನೋಡೋಣ:

ಸ್ವಾಮಿ ಭೂತೇಶಾನಂದಜಿ ಕೊಲ್ಕತಾದ ಕಾಂಕುರ್ ಗಾಚಿಯಲ್ಲಿರುವ ರಾಮಕೃಷ್ಣ ಯೋಗೋದ್ಯಾನದಲ್ಲಿ ಇದ್ದಾಗ, ಆಗಿಂದಾಗ್ಗೆ ಬೇಲೂರುಮಠಕ್ಕೆ ಕಾರ್ಯನಿಮಿತ್ತ ಹೋಗಬೇಕಾಗಿ ಬರುತ್ತಿತ್ತು. ಪ್ರತಿಸಲವೂ ಹೊರಡುವಾಗ ಅವರು ಹೀಗೆ ಹೇಳುತ್ತಿದ್ದರು: "ಸಂಜೆಗೆ ವಾಪಸು ಬಂದುಬಿಡುತ್ತೇನೆ. ಇಲ್ಲಿಗೆ ಭಕ್ತರು ಬಂದಾಗ ನಾನಿಲ್ಲದಿದ್ದರೆ, ಅನ್ಯಥಾ ಭಾವಿಸುತ್ತಾರೆ. ಹಾಗೆಯೇ ನಾನೂ ಅವರನ್ನು ನೋಡಲಾಗುವುದಿಲ್ಲ."

ಸ್ವಾಮೀಜಿಯವರು ತಮ್ಮ ಜೀವನಸಂಧ್ಯೆಯ ಕಡೆಯ ಎರಡು ದಶಕಗಳಲ್ಲಿ ಪ್ರತಿನಿತ್ಯ ಬೆಳಗ್ಗೆ ಮತ್ತು ಸಂಜೆ ಭಕ್ತರನ್ನು ಭೇಟಿ ಮಾಡುತ್ತಿದ್ದರು. ಹೆತ್ತ ತಾಯಿಯಂತೆ ಬಂದವರಿಗೆಲ್ಲರಿಗೂ ಅಕ್ಕರೆಯನ್ನು ತೋರುತ್ತಿದ್ದರು. ಸಂತಪ್ತ ಜನರ ದುಃಖ ಶೋಕಗಳ ವೃತ್ತಾಂತವನ್ನು ಸಾವಧಾನವಾಗಿ ಆಲಿಸಿ, ಸಾಂತ್ವನವನ್ನು ನೀಡುತ್ತಿದ್ದರು. ಒಮ್ಮೆ ಭಕ್ತ ಮಹಿಳೆಯೊಬ್ಬಳು ಹಠಾತ್ತಾಗಿ ತನ್ನ ಪತಿಯನ್ನು ಕಳೆದುಕೊಂಡಳು. ಆ ಸಮಯದಲ್ಲಿ ಸ್ವಾಮೀಜಿಯವರ ಬಳಿಗೆ ಬಂದು ಬಹಳ ದುಃಖದಿಂದ ಗೋಳಿಡಲಾರಂಭಿಸಿದಳು. ಆಕೆಯ ಕಣ್ಣೀರು ನೆಲದ ಮೇಲೆ ಬೀಳಲಾರಂಭಿಸಿತು. ಈ ಘಟನೆಯನ್ನು ಕುರಿತು ಸ್ವಾಮಿ ನಿತ್ಯಮುಕ್ತಾನಂದರು ಹೀಗೆ ಬರೆಯುತ್ತಾರೆ: "ಈ ಸಂದರ್ಭದಲ್ಲಿ ಸ್ವಾಮೀಜಿಯವರು ಅಸಹಾಯಕ ಸ್ಥಿತಿಯಲ್ಲಿದ್ದರು. ಅವರು ಏನು ತಾನೇ ಹೇಳಬಲ್ಲರು? ಹೇಗೆ ತಾನೇ ಆಕೆಗೆ ಸಾಂತ್ವನ ಮಾಡಬಲ್ಲರು? ಅನಂತರ ಬಹಳಷ್ಟು ಸಮಯ ಆ ಭಕ್ತ ಮಹಿಳೆಯ ಜೊತೆಗೆ ಮಾತನಾಡಿ, ಅವಳನ್ನು ಸಮಾಧಾನ ಪಡಿಸಿದರು. ಇದಾದನಂತರ ಆ ಮಹಿಳೆ ಶಾಂತಚಿತ್ತದಿಂದ ತನ್ನ ಮನೆಗೆ ತೆರಳಿದಳು. ಆಮೇಲೆ ಸ್ವಾಮೀಜಿ ನನಗೆ ಹೇಳಿದರು, 'ನೆಲದ ಮೇಲೆ ಬಿದ್ದ ಆ ಕಣ್ಣೀರನ್ನು ಚೆನ್ನಾಗಿ ಒರೆಸಿಬಿಡು. ಯಾರೂ ಅದನ್ನು ತುಳಿಯದಿರಲಿ. ಅದು ದುಃಖದ ಕಣ್ಣೀರು. ಸಾಧಾರಣವಾದ ಕಣ್ಣೀರಲ್ಲ. ಅದನ್ನು ಅಲಕ್ಷ್ಯ ಮಾಡಬಾರದು.' ಅನಂತರದ ದಿನಗಳಲ್ಲಿ, ಆ ಮಹಿಳೆಯ ಮುಖದಲ್ಲಿ ಇನ್ನೆಂದೂ ಶೋಕದ ಛಾಯೆ ಕಾಣಿಸಲೇ ಇಲ್ಲ. ಪ್ರತಿದಿನವೂ ಆಕೆ ದೇವಸ್ಥಾನಕ್ಕೆ ಬಂದು ಜಪ, ಪ್ರಾರ್ಥನೆಗಳಲ್ಲಿ ಬಹಳ ಕಾಲವನ್ನು ಕಳೆಯುತ್ತಿದ್ದಳು."

ಭೂತೇಶಾನಂದಜಿಯವರ ದಿವ್ಯ ಸಾನ್ನಿಧ್ಯವನ್ನು ಪಡೆಯಬೇಕೆಂದು ದೂರದ ದೇಶಗಳಿಂದಲೂ ಭಕ್ತರು ಬರುತ್ತಿದ್ದರು. ಪ್ರತಿ ವರ್ಷ ಜಪಾನಿನಿಂದ ಭಕ್ತರ ಒಂದು ತಂಡ ಬರುತ್ತಿತ್ತು. ಅವರ ಭಕ್ತಿ ನಿಜಕ್ಕೂ ಅಸಾಧಾರಣವಾದುದು ಎಂದೇ ಹೇಳಬೇಕು. ಅವರೆಲ್ಲ ಬೇಲೂರುಮಠದ ಅತಿಥಿಗೃಹದಲ್ಲಿ ತಂಗುತ್ತಿದ್ದರು. ದಿವ್ಯತ್ರಯರಿಗೆ ಸಂಬಂಧಪಟ್ಟ ಸ್ಥಳಗಳಿಗೆ ಮಾತ್ರವೇ ಭೇಟಿಕೊಡುತ್ತಿದ್ದರು. ಇತರ ಪ್ರವಾಸಿಗಳ ಹಾಗೆ ನಗರಪರ್ಯಟನೆಯ ಗೋಜಿಗೆ ಹೋಗುತ್ತಿರಲಿಲ್ಲ. ಅಂಥ ಭಕ್ತರು ಸ್ವಾಮೀಜಿಯವರನ್ನು ತಮ್ಮ ದೇಶಕ್ಕೆ ಆಹ್ವಾನಿಸದೆ ಬಿಟ್ಟಾರೆಯೇ? ಸ್ವಾಮೀಜಿ ಸುಮಾರು ಹತ್ತು ಸಲ ಜಪಾನಿಗೆ ಹೋಗಿದ್ದರು. ಅಲ್ಲಿನ ಭಕ್ತರಿಗೆ ಮಂತ್ರದೀಕ್ಷೆ ಕೊಟ್ಟು, ಭಗವತ್‌ಚಿಂತನೆಯನ್ನು ಉದ್ದೀಪನಗೊಳಿಸುವ ಸತ್ಸಂಗ ಕಾರ್ಯಕ್ರಮಗಳನ್ನು ನಡೆಸುತ್ತಿದ್ದರು. ನಮಗೆ 'ನಾರದ ಭಕ್ತಿಸೂತ್ರ'ದ ಮೇಲಿನ ಅವರ ಇಂಗ್ಲಿಷ್ ಗ್ರಂಥ ಒದಗಿಬಂದದ್ದು ಜಪಾನಿನ ಭಕ್ತರಿಂದಲೇ. ಅಲ್ಲಿ ಸ್ವಾಮೀಜಿಯವರು ಮಾಡಿದ ಪ್ರವಚನಗಳನ್ನು ಅಲ್ಲಿನ ಭಕ್ತರು ಸಂಗ್ರಹಿಸಿ ಕಳಿಸಿಕೊಟ್ಟರು. ಜಪಾನ್ ದೇಶವಲ್ಲದೆ, ಸಿಂಗಾಪುರ, ಮಲೇಷಿಯಾ, ಫಿಜಿ, ಇಂಗ್ಲೆಂಡ್, ಅಮೆರಿಕ, ಕೆನಡಾ ಹಾಗೂ ಆಸ್ಟ್ರೇಲಿಯ ದೇಶಗಳಿಗೂ ಸ್ವಾಮೀಜಿ ಭೇಟಿ ಕೊಟ್ಟಿದ್ದಾರೆ.

ಸ್ವಾಮಿ ಋತಾನಂದಜಿ ಹೀಗೆ ಬರೆಯುತ್ತಾರೆ: "ಒಮ್ಮೆ ವಿದೇಶದಿಂದ ಒಂದು ಕುಟುಂಬ ಬೇಲೂರುಮಠಕ್ಕೆ ಬಂದಿತ್ತು. ಅವರಿಗೆ ಬಹಳ ಕಡಮೆ ಕಾಲಾವಕಾಶ ಇತ್ತು. ಮರುದಿನವೇ ವಿದೇಶಕ್ಕೆ ತಿರುಗಿ ಹೋಗಬೇಕು. ಆದರೆ ಮಂತ್ರದೀಕ್ಷೆ ತೆಗೆದುಕೊಳ್ಳಬೇಕು ಎಂಬ ಪ್ರಬಲ ಇಚ್ಛೆ. ಮರುದಿನ ಬೆಳಗ್ಗೆ ಸ್ವಾಮೀಜಿಯವರನ್ನು ಪರೀಕ್ಷಿಸಲು ವೈದ್ಯರ ತಂಡವೊಂದು ಬರುವುದನ್ನು ಮೊದಲೇ ಖಚಿತಪಡಿಸಲಾಗಿತ್ತು. ಸ್ವಾಮೀಜಿ ತಮ್ಮ ಕಾರ್ಯದರ್ಶಿಯವರನ್ನು ಕರೆದು ಹೀಗೆ ಹೇಳಿದರು, 'ನಾಳೆ ಸಂಜೆಗೆ ಅಥವಾ ರಾತ್ರಿಗೆ ಬರಲು ಸಾಧ್ಯವಾಗುತ್ತದೆಯೇ ಎಂದು ವೈದ್ಯರನ್ನು ಕೇಳಿನೋಡು. ಇಲ್ಲದಿದ್ದರೆ, ಅವರು ನಾಳೆ ಬರುವುದನ್ನೇ ರದ್ದು ಮಾಡು. ನಾಳೆ ನಾನು ಆ ದಂಪತಿಗಳಿಗೆ ದೀಕ್ಷೆಯನ್ನು ಕೊಡುತ್ತೇನೆ.' ಊಹಿಸಲೂ ಆಗದ ರೀತಿಯಲ್ಲಿ ಮಂತ್ರದೀಕ್ಷೆಯ ಕಾರ್ಯಕ್ರಮ ಜರುಗಿಹೋಯಿತು."

ಸ್ವಾಮಿ ಸುನಿರ್ಮಲಾನಂದಜಿ ತಮ್ಮ ನೆನಪುಗಳಲ್ಲಿ ಹೀಗೆ ಬರೆಯುತ್ತಾರೆ: "ಸ್ವಾಮೀಜಿಯವರು ಬಂಗಾಳಿ, ಸಂಸ್ಕೃತ, ಇಂಗ್ಲಿಷ್, ಗುಜರಾತಿ ಮತ್ತು ಹಿಂದಿ ಭಾಷೆಗಳಲ್ಲಿ ಪ್ರವೀಣರು. ಇದಲ್ಲದೆ ಖಾಸಿ ಮತ್ತು ಕನ್ನಡ ಭಾಷೆಗಳೂ ಅವರಿಗೆ ಬರುತ್ತಿದ್ದವು. ಒಮ್ಮೆ ತಮಿಳುನಾಡಿನಿಂದ ಒಬ್ಬ ಭಕ್ತರು ಸ್ವಾಮೀಜಿಯವರನ್ನು ಕಾಣಲು ಬಂದಿದ್ದರು. ಅವರಿಗೆ ತಮಿಳು ಭಾಷೆಯನ್ನು ಬಿಟ್ಟರೆ ಬೇರಾವ ಭಾಷೆಯೂ ಬರುತ್ತಿರಲಿಲ್ಲ. ಅವರನ್ನು ಸಮಾಧಾನ ಪಡಿಸಲು ಸ್ವಾಮೀಜಿ ಕಾತರರಾಗಿದ್ದರು ಏಕೆಂದರೆ ಅವರನ್ನು ನೋಡುತ್ತಲೇ ಆ ಭಕ್ತರು ಭಾವಾವೇಶದಿಂದ ಅಳಲಾರಂಭಿಸಿದರು.